## ಕುಂದು ಕೊರತೆ

### ತ್ಯಾಜ್ಯ ವಿಲೇವಾರಿ ಮಾಡಿಸಿ





ಮೈಸೂರು ಸ್ವಚ್ಛನಗರಿಯಲ್ಲಿ 3ನೇ ಸ್ಥಾನ ಪಡೆದುಕೊಂಡಿರುವುದು ಸ್ವಾಗತಾರ್ಹ. ಆದರೆ, ನಗರದಲ್ಲಿ ಸಂಪೂರ್ಣ ಸ್ವಚ್ಛತೆ ಇನ್ನು ಮರೀಚಿಕೆಯಾಗಿದೆ. ಇಲ್ಲಿನ ಸರ್ ಸಿ.ವಿ.ರಾಮನ್ ರಸ್ತೆಯ ಮೊದಲ ವೃತ್ತದಲ್ಲಿ ಸ್ಥಳೀಯರು ಒಣ ತ್ಯಾಜ್ಯ ಸುರಿದಿದ್ದಾರೆ. ಈಚೆಗೆ ಅದನ್ನು ಸುಟ್ಟುಹಾಕಿದ್ದಾರೆ. ಈವರೆಗೆ ತ್ಯಾಜ್ಯ ವಿಲೇವಾರಿ ಮಾಡಿಸಿಲ್ಲ.

ಅಲ್ಲದೇ, ಈಚೆಗೆ ಬಿಸಿಲಿನ ವಾತಾವರಣ ಹೆಚ್ಚಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ತ್ಯಾಜ್ಯ ವಿಲೇವಾರಿ ಮಾಡಿಸಲು ಕ್ರಮ ಕೈಗೊಳ್ಳಬೇಕು.

–**ಜಗದೀಶ್,** ಸರಸ್ವತೀಪುರಂ

### ಬ್ಯಾರಿಕೇಡ್ ಹಾಕಿ ಅಪಾಯ ತಪ್ಪಿಸಿ

ಕನಕದಾಸನಗರದ ವರ್ತುಲ ರಸ್ತೆಯ ಸೂಪರ್ ಮಾರ್ಕೆಟ್ ಮುಂಭಾಗದ ಸರ್ವೀಸ್ ರಸ್ತೆಯಲ್ಲಿ ಗುಂಡಿ ಅಗೆಯಲಾಗಿದೆ. ಈ ಗುಂಡಿಯನ್ನು ಸರಿಯಾಗಿ ಮುಚ್ಚದೆ ವಾಹನ ಸವಾರರಿಗೆ ಅಪಾಯ ಉಂಟು ಮಾಡುವಂತಿದೆ.

ಕೆಲ ದಿನಗಳ ಹಿಂದೆ ಬೈಕ್ ಸವಾರನೊಬ್ಬ ಇಲ್ಲಿ ಬಿದ್ದು ಅಪಘಾತ ಮಾಡಿಕೊಂಡಿದ್ದ. ಆದ್ದರಿಂದ, ಮುಂದೆ ದೊಡ್ಡ ಮಟ್ಟದ ಅಪಘಾತಗಳು ಉಂಟಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಸಿಮೆಂಟ್ ಚಪ್ಪಡಿಗಳನ್ನು ಸರಿಯಾಗಿ ಮುಚ್ಚಿಸಬೇಕು. ಅಥವಾ ಎಚ್ಚರಿಕೆ ಸೂಚಿಸುವ ಬ್ಯಾರಿಕೇಡ್ ಅನ್ನು ಅಳವಡಿಸಬೇಕು.

**ಬಾಲಾಜಿ ಬಿ.ಜಿ.,** ಕನಕದಾಸನಗರ



### ಚರಂಡಿ ವ್ಯವಸ್ಥೆ ವೈಜ್ಞಾನಿಕವಾಗಿರಲಿ

ಬೋಗಾದಿಯ ಎಸ್‌ಬಿಎಂ ಬಡಾವಣೆಯಲ್ಲಿ ಒಳಚರಂಡಿ ದುರಸ್ತಿಯಿಲ್ಲದೇ, ಚರಂಡಿ ನೀರು ಇಲ್ಲಿನ ಪ್ರೌಢಶಾಲಾ ಹತ್ತಿರದ ಮ್ಯಾನ್ ಹೋಲ್‌ನಲ್ಲಿ ತುಂಬಿ ಹರಿಯುತ್ತಿದೆ.

ಇದರಿಂದ ದಿನೇ–ದಿನೇ ಸೊಳ್ಳೆಗಳ ಕಾಟ ಹೆಚ್ಚಾಗುತ್ತಿದೆ. ಅಲ್ಲದೇ, ಶಾಲಾ ಮಕ್ಕಳು ಹಾಗೂ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಕೊಳಚೆ ನೀರು ಹರಿಯಲು ವ್ಯವಸ್ಥೆ ಮಾಡಬೇಕು.

**ಜೀವನ್**, ಬೋಗಾದಿ






### ಆಶ್ರಮ ರಸ್ತೆಯಲ್ಲಿ ಸ್ವಚ್ಛತೆ ಕಾಪಾಡಿ

ಜಯಲಕ್ಷ್ಮಿಪುರಂನ ಆಶ್ರಮ ರಸ್ತೆಯಲ್ಲಿರುವ ಕಸದ ತೊಟ್ಟಿಯ ಸುತ್ತ ಸ್ಥಳೀಯರು ತ್ಯಾಜ್ಯ ಸುರಿದಿದ್ದಾರೆ. ಇದರಿಂದ ಅಲ್ಲಿರುವ ದನ ಕರುಗಳು ಪ್ಲಾಸ್ಟಿಕ್ ಅನ್ನು ಸೇವಿಸುತ್ತಿದ್ದು, ಅನಾರೋಗ್ಯಕ್ಕೀ ಈಡಾಗುವ ಸಂಭವವಿದೆ. ಪ್ರತಿದಿನ ಇಲ್ಲಿ ತ್ಯಾಜ್ಯ ಹೆಚ್ಚಾಗಿ ಸುರಿಯುತ್ತಾರೆ.

ಈ ಬಗ್ಗೆ ಹಲವು ಬಾರಿ ಪಾಲಿಕೆಗೆ ಮನವಿ ಮಾಡಿದ್ದರೂ ಮೂರು ನಾಲ್ಕು ದಿನಕ್ಕೆ ಒಮ್ಮೆ ತ್ಯಾಜ್ಯ ವಿಲೇವಾರಿ ಮಾಡುತ್ತಾರೆ. ಜನರಿಗೆ ಅನಾರೋಗ್ಯ ಉಂಟಾಗುವುದಕ್ಕೂ ಮುನ್ನವೇ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಸ್ವಚ್ಛತೆ ಕಾಪಾಡಬೇಕು.

**ಶಂಕರ್,** ಜಯಲಕ್ಷ್ಮಿಪುರಂ

### ತ್ಯಾಜ್ಯ ಸಂಗ್ರಹಣೆಗೆ ಕ್ರಮ ಕೈಗೊಳ್ಳಿ

ನಗರದ ನೂರು ಅಡಿ ರಸ್ತೆಯಲ್ಲಿರುವ ಉರ್ದು ಪ್ರಾಥಮಿಕ ಶಾಲೆಯ ಮುಂಭಾಗ ಸ್ಥಳೀರು ತ್ಯಾಜ್ಯ ಸುರಿದಿದ್ದು ಪಾದಚಾರಿಗಳ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ಇದರಿಂದ ದಿನೇ–ದಿನೇ ಸೊಳ್ಳೆಯ ಕಾಟ ಹೆಚ್ಚಾಗುತ್ತಿದೆ. ಅಲ್ಲದೇ, ಶಾಲಾ ಮಕ್ಕಳು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಕಸ ವಿಲೇವಾರಿ ಮಾಡಿಸಬೇಕು. ಹಾಗೂ ತ್ಯಾಜ್ಯ ಸಂಗ್ರಹಣಾ ಡಬ್ಬವನ್ನು ಅಳವಡಿಸಬೇಕು.

**ಸುನೀಲ್**, ಬೋಗಾದಿ



## ‘ಪುಂಸವನ’ ಸಂಸ್ಕಾರ- ಜ್ಞಾನಿಗಳ ವಂಶಕ್ಕಾಗಿ



**ತಾರೋಡಿ ಸುರೇಶ**

ಗರ್ಭಾಧಾನದ ನಂತರ ನಡೆಯಬೇಕಾದ ಸಂಸ್ಕಾರವಿದು. ಪುಂ ಎಂದರೆ ಪುರುಷ. ಸವನ ಎಂದರೆ ಪ್ರಸವಿಸುವುದು. ಯಾವ ಸಂಸ್ಕಾರದಿಂದ ಪುರುಷಶಿಶುವನ್ನು ಪಡೆಯುತ್ತೇವೆಯೋ ಅದು ಪುಂಸವನ. ಹಾಗಿದ್ದರೆ ಸ್ತ್ರೀ ಸಂತತಿಯು ಬೇಡವೇ? ಹುಟ್ಟುವ ಶಿಶುಗಳೆಲ್ಲ ಪುರುಷರೇ ಆಗಿ ತಕ್ಕ ಸಂಖ್ಯೆಯ ಸ್ತ್ರೀಯರಿಲ್ಲದಿದ್ದರೆ ವಂಶವೃದ್ಧಿ ಹೇಗೆ? ಸ್ತ್ರೀಯರನ್ನು ಕುರಿತು ಈ ಪಕ್ಷಪಾತ ನ್ಯಾಯವೇ? ಶಾಸ್ತ್ರಗಳನ್ನೇ ಉಲ್ಲೇಖಿಸಿ ಶ್ರೀರಂಗ ಮಹಾಗುರುಗಳು ಹೀಗೆ ಉತ್ತರಿಸಿದ್ದರು. ಪುರುಷ ಎಂದರೆ ಎರಡು ಅರ್ಥಗಳಿವೆ. ಬ್ರಹ್ಮಜ್ಞಾನಿ ಎಂದು ಒಂದರ್ಥ. ಬ್ರಹ್ಮಜ್ಞಾನಿಯಲ್ಲದವನನ್ನು ನಮ್ಮ ಸಾಹಿತ್ಯಗಳಲ್ಲಿ ಸ್ತ್ರೀ ಎಂದೇ ಕರೆದಿದ್ದಾರೆ.

ಕಾರಣ ಪ್ರಕೃತಿಯ ಪ್ರತಿನಿಧಿ ಸ್ತ್ರೀ. ಅಂತಹ ಪ್ರಕೃತಿ ಕ್ಷೇತ್ರವನ್ನು, ಇಂದ್ರಿಯಕ್ಷೇತ್ರವನ್ನು ಮೀರಿ ದೈವಸಾಕ್ಷಾತ್ಕಾರ ಮಾಡಿಕೊಂಡಿದ್ದರೆ ಅವನು ಪುರುಷ. ಇಲ್ಲದಿದ್ದರೆ ಸ್ತ್ರೀ ಎಂಬ ತಾತ್ವಿಕ ಅಭಿಪ್ರಾಯವಿಲ್ಲಿದೆ. ಇಲ್ಲಿ ಪುರುಷ ಶಿಶುವನ್ನು ಪಡೆಯುವುದು ಎಂದರೆ ಜ್ಞಾನಿಯಾದ ಶಿಶುವನ್ನು ಪಡೆಯುವುದು ಎಂದರ್ಥ. ‘ಜ್ಞಾನಿಯಾಗಿದ್ದರೆ ಬಾಹ್ಯ ಲಕ್ಷಣಗಳು ಹೆಣ್ಣಿನಂತೆ ಇದ್ದರೂ ಸ್ತ್ರೀಯನ್ನೂ ಪುರುಷ ಎಂದೇ ಕರೆಯಬೇಕು’ ಎಂದು ವೇದಮಾತೆಯು ಹೇಳುತ್ತಾಳೆ.

ಪುರುಷ ದೇಹದ ಬಾಹ್ಯ ಚಿಹ್ನೆಗಳುಳ್ಳವನು ಪುರುಷ ಎನ್ನುವುದು ಎರಡನೆಯ ಅರ್ಥ. ಗಂಡಸು ಎನ್ನುವ ಅಭಿಪ್ರಾಯದಲ್ಲಿ ಬಳಸುತ್ತೇವೆ. ಗಂಡು ಶಿಶುವನ್ನು ಪ್ರಥಮ ಸಂತಾನವಾಗಿ ಬಯಸುವುದರಲ್ಲಿಯೂ ತಪ್ಪೇನಿಲ್ಲ. ಋಷಿಗಳು ತಮ್ಮ ಅತೀಂದ್ರಿಯ ದೃಷ್ಟಿಯಿಂದ ನೋಡಿ ‘ಪುತ್ರನು ತನ್ನ ಜನ್ಮದ ಕಾರಣದಿಂದಲೇ ಮಾತಾಪಿತೃಗಳನ್ನು ಪುತ್ ಎಂಬ ನರಕದಿಂದ ಪಾರುಮಾಡುತ್ತಾನೆ’ ಎಂದಿದ್ದಾರೆ. ಇದು ವಿಶೇಷವಾಗಿ ಸ್ತ್ರೀ ಗರ್ಭಕ್ಕೆ ಮಾಡುವ ಸಂಸ್ಕಾರ. ಮಹಾಪಾಪ ಕೃತ್ಯಗಳನ್ನು ಮಾಡಿರದಿದ್ದರೆ ಮುಂದಿನ ಎಲ್ಲ ಗರ್ಭಗಳಿಗೂ ಈ ಶುದ್ಧಿಯೇ ಮುಂದುವರೆಯುತ್ತದೆ.

ಪುಂಸವನದ ಆಚರಣೆ ಸಂಕ್ಷಿಪ್ತವಾಗಿ ಹೀಗಿದೆ. ಪುಂಸವನ ಸಂಸ್ಕಾರಕ್ಕೆ ಪತ್ನಿಯು ಗರ್ಭವತಿಯಾಗಿರುವುದು ಖಚಿತವಾಗಿರಬೇಕು. 2, 4, 6 ಅಥವಾ 8ನೆಯ ತಿಂಗಳು ಉತ್ತಮ. ಇವೆಲ್ಲವೂ ಸಮ ಸಂಖ್ಯೆಯಾಗಿರುವುದರಿಂದ ಪುರುಷ ಸಂತಾನಕ್ಕೆ ಪೋಷಕ. ಪುರುಷ ನಕ್ಷತ್ರಗಳೂ ಕೂಡಿಬಂದರೆ ಇನ್ನೂ ಅನುಕೂಲ.

ಪತ್ನಿಯು ಮಂಗಳ ಸ್ನಾನ, ಮಹಾತ್ಮರ ಅಥವಾ ದೇವತೆಗಳ ದರ್ಶನ ಮಾಡಿ ಹೊಸಬಟ್ಟೆಯನ್ನು ಧರಿಸಿ ಶುದ್ಧಳಾಗಿರಬೇಕು. ಮುಂದಿನ ಎಲ್ಲ ಗರ್ಭಗಳೂ ಶುದ್ಧವಾಗಲಿ, ಪುರುಷ ಶಿಶುವು ಜನಿಸಲಿ ಮತ್ತು ಜ್ಞಾನಕ್ಕೆ ವಿರೋಧವಾದ ದುಷ್ಟಶಕ್ತಿಗಳ ನಿವಾರಣೆಯಾಗಲಿ ಎಂಬ ಸಂಕಲ್ಪ ಮಾಡಬೇಕು. ಅಂಗೈಯಲ್ಲಿ ನಿಗಧಿತ ಪ್ರಮಾಣದ ಮೊಸರನ್ನು ಪತಿಯಿಂದ ಹಾಕಿಸಿಕೊಂಡು, ಆ ಮೊಸರಿನ ಎಡಬಲಗಳಲ್ಲಿ ಲಿಂಗಾಕಾರದಲ್ಲಿ ಧಾನ್ಯವನ್ನಿಟ್ಟು ಪುಂ-ಭಾವವನ್ನು ಸೇವಿಸುತ್ತಿದ್ದೇನೆ ಎಂಬ ಭಾವನೆಯಲ್ಲಿ ಮಾಡಬೇಕು.

ಆಲದ ಶಾಖೆಯನ್ನು ಅರೆಯಿಸಿ ಅದರ ರಸವನ್ನು ಪತಿಯು, ನಿರ್ದಿಷ್ಟ ಮಂತ್ರದೊಂದಿಗೆ ತನ್ನ ಅಂಗುಷ್ಠದ ಮೂಲಕ ತನ್ನ ಪತ್ನಿಯ ಮೂಗಿನ ಬಲಹೊಳ್ಳೆಯಲ್ಲಿ ಬಿಡುತ್ತಾನೆ. ಔಷಧಿಯ ಲಾಭ, ಪುರುಷಭಾವದ ಸ್ಮೃತಿ ಮತ್ತು ಪರಮಾತ್ಮನನ್ನು ಪ್ರತಿನಿಧಿಸುವ ಹೆಬ್ಬೆರಳಿನ ಮೂಲಕ ಔಷಧಿಯ ರಸವನ್ನು ಬಿಡುವುದು ಇವೆಲ್ಲವೂ ಪುರುಷ ಸಂತಾನಕ್ಕೆ ಬೇಕಾದ ಧರ್ಮವನ್ನು ಸ್ತ್ರೀಯ ಮೈಯಲ್ಲಿ ಪ್ರಬೋಧಗೊಳಿಸುವುದು. ಆಧ್ಯಾತ್ಮಿಕ, ಅಧಿದೈವ, ಅಧಿಭೌತಿಕ ಮೂರೂ ಕ್ಷೇತ್ರಗಳಿಗೂ ವ್ಯಾಪಿಸುವಂತೆ ಆಚರಣೆಗಳೊಂದಿಗೆ ಜ್ಞಾನಿಯಾದ ಪುರುಷ ಶಿಶುವನ್ನು ಪಡೆಯಲು ಋಷಿಗಳು ರೂಪಿಸಿಕೊಟ್ಟ ಸಂಸ್ಕಾರವೇ ಪುಂಸವನ.

## ಮುನ್ನೋಟ

### ಮಾರ್ಚ್ 12, ಮಂಗಳವಾರ

#### ಹದಿನಾಲ್ಕು ಕೃತಿಗಳ ಲೋಕಾರ್ಪಣೆ

ಮೈಸೂರಿನ ಸಂವಹನ ಪ್ರಕಾಶನ ಪ್ರಕಟಿಸಿರುವ ಹದಿನಾಲ್ಕು ಪುಸ್ತಕಗಳು ಮಂಗಳವಾರ ಲೋಕಾರ್ಪಣೆಗೊಳ್ಳಲಿವೆ.

ಅಂದು ಸಂಜೆ 6 ಗಂಟೆಗೆ ಡಾ.ಶಿವರಾತ್ರಿ ರಾಜೇಂದ್ರ ಭವನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮೈಸೂರು ವಿ.ವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರು ಲೇಖಕರಾದ ಡಾ.ಎಚ್.ಎನ್.ರುದ್ರೇಶ್ ಅವರ ‘ನಕ್ಕಳಾ ರಾಜಕುಮಾರಿ’, ‘ನವಮಿ ಮಲ್ಲರ ದಿಬ್ಬ’, ಡಾ.ಚಂದ್ರಶೇಖರಯ್ಯ ಅವರ ‘ಬುದ್ಧ ಧಮ್ಮ ಅಂದರೇನು’, ಡಾ.ಸರಜೂ ಕಾಟ್ಕರ್ ಅವರ ‘ಬಸವ ಮತ್ತು’, ಪ್ರೊ.ವೈ.ಎಸ್.ಗೌರಮ್ಮ ಅವರ ‘ಸಾಕ್ರೆಟೀಸನಿಂದ ಹೆಗಲ್‌ವರೆಗೆ’, ಡಾ.ಸಿ.ನಾಗಣ್ಣ ಅವರ ‘ಮುಗಿಯದ ಮುನ್ನುಡಿ’, ಡಾ.ಕೆ.ಸಿ.ಬಸವರಾಜು ಅವರ ‘ವಿಶ್ವ ರೈತಸಂತ’, ಡಾ.ವೈ.ಸಿ.ಭಾನುಮತಿ ಅವರ ‘ಓಲೆಗರಿಗಳ ಸಿರಿಯಲ್ಲಿ’, ಎಚ್.ಎಂ.ನಾಗರಾಜರಾವ್ ಅವರ ‘ಗೆಲುವಾಗೆಲೆ ಮನ!’, ‘ದೇವಭೂಮಿ ಜೀವಯಾನ’, ಬಸವರಾಜ ಶಿವಪುರ ಅವರ ‘ಶಿವಪುರ 2 ಅಮೆರಿಕಾ’, ಜೆ.ಪಿ.ವಿಜಯಕುಮಾರ ಅವರ ‘ನೆನಪಿನಂಗಳದಲ್ಲಿ ಕಳೆದು ಹೋಗುವ ಅಸ್ತಿತ್ವ’, ಡಾ.ಎಂ.ಎಲ್.ರಾಜೇಂದ್ರ ಪ್ರಸಾದ್ ಅವರ ‘ಆರೋಗ್ಯಕ್ಕಾಗಿ ಯೋಗಾಸನ’ ಹಾಗೂ ಡಾ.ಡಿ.ಸಿ.ಚಿತ್ರಲಿಂಗಯ್ಯ ಅವರ ‘ಕಾಡುಗೊಲ್ಲ ಈರಗಾರ ಪೂಜಾರ್ ಚಿಕ್ಕಾವಳಪ್ಪ’ ಅವರ ಕೃತಿಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ.

ಅತಿಥಿಗಳಾಗಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಭಾಗವಹಿಸಲಿದ್ದು, ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ.ನೀಲಗಿರಿ ಎಂ.ತಳವಾರ, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಕೃತಿಗಳ ಕುರಿತು ಮಾತನಾಡುವರು. ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅಧ್ಯಕ್ಷತೆ ವಹಿಸುವರು.

#### ಗುರು ವೈಭವೋತ್ಸವ

ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠದ ವತಿಯಿಂದ ಮೈಸೂರಿನ ಸುಬ್ಬರಾಯನ ಕೆರೆ ಆವರಣದಲ್ಲಿ ಗುರು ವೈಭವೋತ್ಸವ ನಡೆಸಲಾಗುತ್ತಿದೆ.

ಅದರಂತೆ, ಮಂಗಳವಾರ (ಮಾರ್ಚ್ 12) ನವಗ್ರಹ ಸಹಿತ ಆಶ್ಲೇಷ ಹೋಮ, ಬುಧವಾರ (ಮಾರ್ಚ್ 13) ಶ್ರೀರಾಘವೇಂದ್ರ ಅಷ್ಟಾಕ್ಷರ ಹೋಮ ಕಾರ್ಯಗಳು ಜರುಗಲಿವೆ.

ಯತಿವರೇಣ್ಯರ ಪಟ್ಟಾಭಿಷೇಕ ಮಹೋತ್ಸವ ಹಾಗೂ ವರ್ಧಂತ್ಯುತ್ಸವವನ್ನೊಳಗೊಂಡ ‘ಶ್ರೀ ರಾಘವೇಂದ್ರ ಗುರು ವೈಭವೋತ್ಸವ’ವನ್ನು ಇಲ್ಲಿನ ಬೃಂದಾವನ ಸನ್ನಿಧಿಯಲ್ಲಿ ಆಚರಿಸಲಾಗುತ್ತದೆ.

### ಮಾರ್ಚ್ 21, ಗುರುವಾರ

#### ಬೆಳದಿಂಗಳ ಸಂಗೀತ

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಮಾರ್ಚ್ 21ರಂದು ಸಂಜೆ 6ಕ್ಕೆ ಬೆಳದಿಂಗಳ ಸಂಗೀತ ಕಾರ್ಯಕ್ರಮದ ಅಂಗವಾಗಿ ವಿದ್ವಾನ್ ವಿವೇಕ್ ಮೂಜಿಕುಲಂ ಅವರಿಂದ ಗಾಯನ ಕಛೇರಿಯನ್ನು ಆಯೋಜಿಸಲಾಗಿದೆ.

ಇವರಿಗೆ ವಿದ್ವಾನ್ ವಿ.ಎಸ್.ಗೋಕುಲ್ (ವಯೊಲಿನ್), ಬಿ.ಸಿ.ಮಂಜುನಾಥ್ (ಮೃದಂಗ) ವಾದ್ಯ ಸಹಕಾರ ನೀಡಲಿದ್ದಾರೆ.

## ಪ್ರಿಯ ಗ್ರಾಹಕ... ಎಷ್ಟು ಜಾಗೃತ?

**ಒಂದನೇ ಪುಟದಿಂದ**

ಒಂದು ವೇಳೆ ಇಲ್ಲಿ ಭರವಸೆಯ ಧಕ್ಕೆಯಾದಲ್ಲಿ ದೋಷಯುಕ್ತ ವಸ್ತು, ಪದಾರ್ಥ ಅಥವಾ ಸೇವೆಯಿಂದ ಉಂಟಾಗುವ ನಷ್ಟಕ್ಕೆ ಅಥವಾ ಹಾನಿಗೆ ಪರಿಹಾರ ಪಡೆಯುವ ಹಕ್ಕು ಗ್ರಾಹಕನದೇ ಆಗಿದೆ.

ಮುಂದಿನ ಯಾವುದೇ ಖರೀದಿಗೂ ಮೊದಲು ನಾನು ವಂಚನೆಗೆ ಒಳಗಾಗುತ್ತಿಲ್ಲ. ನೀಡಿದ ಹಣಕ್ಕೆ ಸೂಕ್ತವಾದ, ಗುಣಮಟ್ಟದ ವಸ್ತು ಪಡೆದುಕೊಂಡಿದ್ದೇನೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಅಗತ್ಯ.ತಾನು ಖರೀದಿಸುವ ವಸ್ತುಗಳಿಗೆ ಸಂಬಂಧಿಸಿದ ಪ್ಯಾಕೇಜಿಂಗ್ ಅಥವಾ ವಿವರಣೆ ಪತ್ರಿಕೆಯಲ್ಲಿ (ಕ್ಯಾಟಲಾಕ್) ನಮೂದಿಸಿದ ಅಂಶಗಳು ಸರಿಯಾಗಿವೆ. ನ್ಯಾಯಯುತವಾಗಿವೆ. ನಿಗದಿತ ಬೆಲೆಯನ್ನು ವಿಧಿಸಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಅಗತ್ಯ. ಅಷ್ಟರ ಮಟ್ಟಿಗೆ ಗ್ರಾಹಕನಾಗಿ ಜಾಗೃತರಾಗಬೇಕು. ಜೊತೆಗೆ, ಗ್ರಾಹಕರ ಹಿತರಕ್ಷಣಾ ಕಾಯ್ದೆಯ ಅರಿವು ಹೊಂದಿದ್ದಲ್ಲಿ ಆ ಮಟ್ಟಿಗೆ ವಂಚನೆ ಪ್ರಕರಣಗಳನ್ನು ತಡೆಯಬಹುದು. ಗ್ರಾಹಕರಾಗಿ ಇದು ಎಲ್ಲರ ಜವಾಬ್ದಾರಿಯೂ ಹೌದು.



### ಆನ್‌ಲೈನ್ ವಹಿವಾಟು

ಇದೊಂದು ಡಿಜಿಟಲ್ ಪರ್ವ. ಆನ್‌ಲೈನ್ ಪೋರ್ಟಲ್ ಮೂಲಕ ವಸ್ತು ಖರೀದಿಸುವಾಗ ಷರತ್ತುಗಳನ್ನು ಪೂರ್ಣ ಓದಿಕೊಳ್ಳುವುದು. ಅಗತ್ಯ. ಸಾಮಾನ್ಯವಾಗಿ ಇಲ್ಲಿಯೂ ಖರೀದಿಸಿದ ವಸ್ತು ತೃಪ್ತಿ ನೀಡದಿದ್ದಲ್ಲಿ ವಸ್ತುವನ್ನು ನಿರ್ದಿಷ್ಟ ದಿನದಲ್ಲಿ ಹಿಂದಿರುಗಿಸುವ, ಬೇರೆಯನ್ನು ಖರೀದಿಸುವ ಅಥವಾ ಹಣ ವಾಪಸು ಪಡೆಯುವ ಆಯ್ಕೆಗಳು ಇರುತ್ತವೆ.

ಇವುಗಳನ್ನು ಮೊದಲೇ ಖಾತರಿಪಡಿಸಿಕೊಳ್ಳುವುದು ಅಗತ್ಯ. ಏಕೆಂದರೆ, ಡಿಜಿಟಲ್ ಸ್ವರೂಪದಲ್ಲಿ ವಹಿವಾಟು ನಡಸಿದಾಗ ಗ್ರಾಹಕನಿಗೆ ವಸ್ತುವನ್ನು ಖರೀದಿ ಪೂರ್ವದಲ್ಲಿ ಭೌತಿಕವಾಗಿ ನೋಡುವ ಅವಕಾಶ ಇರುವುದಿಲ್ಲ. ಹಣ ಪೂರ್ಣ ಪಾವತಿಯಾದ ಬಳಿಕವೇ ವಸ್ತುವನ್ನು ಪ್ಯಾಕೇಜ್ ತೆರೆಯುವ ಅವಕಾಶ ಇರುತ್ತದೆ.

ಯಾವುದೇ ವಸ್ತುವನ್ನು ಹೀಗೆ ಖರೀದಿಸಿ ಪ್ಯಾಕೇಜ್ ತೆರೆಯುವ ಮುನ್ನ ಅದರ ವಿಡಿಯೊ ಮಾಡಿಕೊಳ್ಳುವುದು ಉತ್ತಮ. ಹೇಗೂ, ಈಗ ಬಹುತೇಕ ಸ್ಮಾರ್ಟ್ ಫೋನ್ ಬಳಕೆ ಯಲ್ಲಿ ಇರುವ ಕಾರಣ ಇದು ಸುಲಭ. ಒಂದು ವೇಳೆ ಮೂಲ ಪ್ಯಾಕೇಜ್‌ನಲ್ಲಿಯೇ ದೋಷ ಇದ್ದರೆ ಗ್ರಾಹಕ ತನ್ನ ಹಕ್ಕು ಮಂಡಿಸಲು ಇದು ನೆರವಾಗಲಿದೆ.

### ನೀವೂ ಕಳುಹಿಸಿ

‘ಮೆಟ್ರೊ’ ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...
ಇ ಮೇಲ್: mysoremetro@prajavani.co.in

**ವಾಟ್ಸ್‌ಆ್ಯಪ್; 95133 22937**

## ಚಿಣ್ಣರ ಚಿತ್ರ





ಮರಿಮಲ್ಲಪ್ಪ ಇಂಗ್ಲಿಷ್ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಎಚ್.ವಿ.ಕರುಣಾ ಪ್ರಿಯಾ ಬಿಡಿಸಿದ ಚಿತ್ರ